ಇ) ಈ ಕಾಮಗಾರಿ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುತ್ತದೆ. ಈ ಕಾಮಗಾರಿಗೆ ಟೆಂಡರ್ ಗಳು ಬಂದಿದ್ದು, ಟೆಂಡರ್‌ಗೆ ಒಪ್ಪಿಗೆಯನ್ನು ತೆಗೆದುಕೊಂಡು ಕೆಲಸವನ್ನು ಕೂಡಲೇ ಶುರು ಮಾಡುವಂತೆ ಸಂಬಂಧಪಟ್ಟ ಜಿಲ್ಲಾ ಪರಿಷತ್ತಿಗೆ ತಿಳಿಸಲಾಗುವುದು.

ಶ್ರೀ ಬಿ. ಜಿ. ಜವಳಿ.—ಮಾನ್ಯ ಅಧ್ಯಕ್ಷರೇ, ಮುಧೋಳ್ ತಾಲ್ಲೂಕಿನ ಮಲ್ಲಾಪುರ ಗ್ರಾಮ ಸದರಿ ಹಳ್ಳದ ಆಚೆಕಡೆ ಬಹಳದೂರ ಇರುವುದರಿಂದ, ಆ ಹಳ್ಳಿಯಿಂದ ತಾಲ್ಲೂಕು ಕೇಂದ್ರವಾದ ಮುಧೋಳ್ ಪಟ್ಟಣಕ್ಕೆ ಬರುವುದಕ್ಕೆ ೬೦ ಕಿಲೋಮೀಟರ್ ಸುತ್ತುಪರಿದು ಬರುವ ಪರಿಸ್ಥಿತಿ ಇದೆ. ಮಾನ್ಯ ಸಚಿವರು ಇದು ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುತ್ತದೆ ಎಂದು ಹೇಳಿದರು, ಆದುದರಿಂದ ಇದರ ಬಗ್ಗೆ ನಾನು ಇಲ್ಲಿ ಪ್ರಶ್ನೆ ಕೇಳುವುದು ಉಚಿತವಲ್ಲ. ಆ ಹಳ್ಳಿಗೆ ಸಂಪರ್ಕ ರಸ್ತೆ ಏರ್ಪಡಿಸುವ ಸಲುವಾಗಿ ೧೯೮೬ನೇ ಇಸವಿಯಲ್ಲೇ ಈ ಸೇತುವೆ ಕೆಲಸಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಲಾಯಿತು. ಇದು ಎಂಟು ಲಕ್ಷ ರೂಪಾಯಿಗಳ ಯೋಜನೆಯಾಗಿದ್ದು, ಇದು ತೀವ್ರಗತಿಯಿಂದ ಆಗುವ ಹಾಗೆ ಮಾಡಲು ಮಾನ್ಯ ಸಚಿವರು ಆಸಕ್ತಿ ವಹಿಸಿ, ಜಿಲ್ಲಾಪರಿಷತ್‌ಗೆ ಹೇಳಬೇಕೆಂಬುದು ಒಂದು. ಎರಡನೆಯದಾಗಿ, ಈ ಸೇತುವೆಗಾಗಿ ಹಿಂದಿನಿಂದಲೂ ಹಲವಾರು ಜನ ಒತ್ತಾಯ ಮಾಡಿದರೂ ಸಹಿತ, ೧೯೮೬ರಲ್ಲಿ ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದರೂ ಸಹಿತ ತಡಮಾಡಿ ಕೆಲಸ ಪ್ರಾರಂಭ ಮಾಡಿದ್ದಾರೆ. ಇದರಿಂದ ಆ ಭಾಗದಜನರಿಗೆ ಬಹಳ ತೊಂದರೆಯಾಗಿದೆ. ಜಿಲ್ಲಾಪರಿಷತ್ತು ತಮ್ಮ ಅಧಿಕಾರ ವ್ಯಾಪ್ತಿಗೆ ಬರದಿದ್ದರೂ ಸಹಿತ, ತಾವು ಆಸಕ್ತಿ ವಹಿಸಿ ಸದರಿ ಪಿ. ಡಬ್ಲ್ಯೂ. ಡಿ. ಇಲಾಖೆಯ ಮುಖಾಂತರ ಈ ಕಾಮಗಾರಿಯನ್ನು ಬೇಗ ಪ್ರಾರಂಭ ಮಾಡುವಂತೆ ವ್ಯವಸ್ಥೆ ಮಾಡ ಬೇಕೆಂದು ನಾನು ಅವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಸರಕಾರಕ್ಕೆ ಇರತಕ್ಕಂಥ ಅಧಿಕಾರ ವ್ಯಾಪ್ತಿಯಲ್ಲೇ ಶೀಘ್ರವಾಗಿ ಈ ಕೆಲಸ ತೆಗೆದುಕೊಳ್ಳಬೇಕೆಂದು ಜಿಲ್ಲಾಪರಿಷತ್ತಿಗೆ ಕೇಳಿಕೊಳ್ಳುತ್ತೇನೆ.

ಚಿಕ್ಕನಾಯಕನ ಹಳ್ಳಿಗೆ ಪ್ರಥಮದರ್ಜೆ ಕಾಲೇಜನ್ನು ಮಂಜೂರು ಮಾಡಿರುವ ಬಗ್ಗೆ

೯೪೬(೨೯೧೫) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ),—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೭-೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ೬ ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡಿದ್ದು, ಆ ಪೈಕಿ ಚಿಕ್ಕನಾಯಕನ ಹಳ್ಳಿಗೆ ಮಾಡದೇ ಇರುವುದು ನಿಜವೇ ?

ಆ) ಸದರಿ ಕಾಲೇಜನ್ನು ೧೯೮೮-೮೯ನೇ ಸಾಲಿನಲ್ಲಿ ಮಂಜೂರು ಮಾಡುವುದಾಗಿ ಆಶ್ವಾಸನೆ ನೀಡಿ ವಿಶ್ವವಿದ್ಯಾನಿಲಯಕ್ಕೆ ಅಫೆಲಿಯೇಷನ್ ಫೀಸನ್ನು ಕಟ್ಟಿದ್ದು ನಿಜವಲ್ಲವೇ ?

ಇ) ಪ್ರಯೋಗ ಶಾಲೆಯ ಉಪಕರಣಗಳಿಗಾಗಿ ಸಾರ್ವಜನಿಕರಿಂದ ವಂತಿಕೆಯಾಗಿ ರೂ. ೧ ಲಕ್ಷ ಗಳನ್ನು ನೀಡಿದಾಗ್ಯೂ ಈ ವರೆಗೆ ಕಾಲೇಜನ್ನು ಪ್ರಾರಂಭಿಸದಿರಲು ಕಾರಣವೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ನಿಜ.

ಆ) ನಿಜ.

ಇ) ಹೌದು, ಆದರೆ ಸರ್ಕಾರವು ಕೇವಲ ಕಲಾ ಮತ್ತು ವಾಣಿಜ್ಯ ವಿಭಾಗಗಳನ್ನು ತೆರೆಯಲು ಹಾಗೂ ವಿಜ್ಞಾನ ವಿಭಾಗವನ್ನು ಆರ್ಥಿಕ ಕೊರತೆಯಿಂತಾಗಿ ತೆರೆಯಬಾರದೆಂಬ ನಿರ್ಣಯ ತೆಗೆದುಕೊಂಡ ಕಾರಣ ವಿಶ್ವವಿದ್ಯಾನಿಲಯವು ಈ ಕಾಲೇಜು ಪ್ರಾರಂಭಿಸಲು ವಿಜ್ಞಾನ ಸಂಯೋಜನೆಗೆ ಅನುಮತಿ ನೀಡಿದ್ದಾಗ್ಯೂ ಕಾಲೇಜು ಸ್ಥಾಪಿಸಲಾಗಲಿಲ್ಲ. ಈಗ ಕಾಲೇಜು ಶಿಕ್ಷಣ ನಿರ್ದೇಶಕರನ್ನು ಕಲಾ/ವಾಣಿಜ್ಯ ಸಂಯೋಜನಗಳಿಗೆ ವಿಶ್ವ ವಿದ್ಯಾನಿಲಯ ಶಿಫಾರಸ್ಸು ಪಡೆಯಲು ತಿಳಿಸಲಾಗಿದೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಸರಕಾರಿ ಪ್ರಥಮದರ್ಜೆ ಕಾಲೇಜಿನ ಬೇಡಿಕೆ, ನಮ್ಮ ತಾಲ್ಲೂಕಿನ ಬಹುದಿನಗಳ ಮುಖ್ಯ ಬೇಡಿಕೆ. ಇದರ ಬಗ್ಗೆ ಕಳೆದ ಮೂರು ವರ್ಷಗಳಿಂದ ಸತತವಾಗಿ ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಿ ಸರಕಾರವನ್ನು ಕೇಳುತ್ತಿದ್ದೇನೆ. ಪ್ರತ್ಯೇಕವಾಗಿ ಮಾಗಿನ

ಮುಖ್ಯಮಂತ್ರಿಗಳಿಗೂ ಹಾಗೂ ಸಂಬಂಧಪಟ್ಟ ಮಂತ್ರಿಗಳಿಗೂ ಸಹ ಮನವಿ ಸಲ್ಲಿಸಿದ್ದೇನೆ. ಆದರೆ ೧೯೮೭-೮೮ ರಲ್ಲಿ ಸರಕಾರ ಆರು ಕಾಲೇಜುಗಳನ್ನು ಕೊಟ್ಟಿದ್ದರು. ಆದರಲ್ಲಿ ಚಿಕ್ಕನಾಯಕನಹಳ್ಳಿಯನ್ನು ಕೈಬಿಟ್ಟರು ಈ ಸದನದಲ್ಲಿ ನಾನು ಈ ಬಗ್ಗೆ ಪ್ರಶ್ನೆಮಾಡಿದಾಗ ೧೯೮೮-೮೯ ರಲ್ಲಿ ಕಡ್ಡಾಯವಾಗಿ ಕೊಟ್ಟೇ ಕೊಡುತ್ತೆವೆಂಬ ಆಶ್ವಾಸನೆಯನ್ನು ಕೊಡಲಾಯಿತು. ೧೯೮೮-೮೯ರಲ್ಲಿ ಈ ಕಾಲೇಜು ಬರುತ್ತದೆಂದು ಹೇಳಿ ಮಂತ್ರಿಮಂಡಲದ ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ ಎಂದು ರೇಡಿಯೋದಲ್ಲಿ ಮತ್ತು ಪತ್ರಿಕೆಗಳಲ್ಲಿ ಪ್ರಕಟಣೆಆಗಿದೆ. ನೂರಾರು ಜನ ವಿದ್ಯಾರ್ಥಿಗಳು ಈ ಕಾಲೇಜು ಪ್ರಾರಂಭವಾಗುತ್ತದೆಂದು ಕಾದು ಕುಳಿತ್ತಿದ್ದಾರೆ. ೧೯೮೮-೮೯ನೇ ಸಾಲಿನಲ್ಲಿಯೇ ಈ ಕಾಲೇಜು ಪ್ರಾರಂಭವಾಗಬೇಕಾಗಿತ್ತು. ಆದರೆ ಅಕಾಡೆಮಿಕ್ ಇಯರ್‌ನಲ್ಲಿ ಬೇರೆ ಕಡೆ ಶಾಲಾ ಕಾಲೇಜುಗಳು ಪ್ರಾರಂಭವಾಗಿದ್ದು ಚಿಕ್ಕನಾಯಕನಹಳ್ಳಿಯಲ್ಲಿ ಮಾತ್ರ ಕಾಲೇಜು ಪ್ರಾರಂಭವಾಗದೇ ಇರುವುದಕ್ಕೆ ಕಾರಣವೇನು ? ಅಲ್ಲಿ ಯಾವಾಗ ಕಾಲೇಜು ಪ್ರಾರಂಭ ಮಾಡುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಕಪ್ಪನವರು ತಮ್ಮ ಭಾಗದಲ್ಲಿ ಒಂದು ಕಾಲೇಜು ಪ್ರಾರಂಭ ಮಾಡಿಸಬೇಕೆಂದು ಪ್ರಯತ್ನ ಮಾಡಿ ಒಂದು ಲಕ್ಷ ರೂಪಾಯಿಗಳನ್ನು ವಿಜ್ಞಾನ ವಿಭಾಗವನ್ನು ತೆರೆಯುವುದಕ್ಕೆ ಕೂಡಿಸಿ ಸರ್ಕಾರಕ್ಕೆ ಕೊಟ್ಟಿದ್ದಾರೆ. ಆದರೆ ಒಂದು ವಿಜ್ಞಾನ ವಿಭಾಗವನ್ನು ತೆರೆದು ಕಾಲೇಜು ಪ್ರಾರಂಭ ಮಾಡಬೇಕಾದರೆ ಪ್ರಾರಂಭಿಕವಾಗಿ ಸುಮಾರು ೫ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ವಿಜ್ಞಾನ ವಿಭಾಗಕ್ಕೆ ಬೇಕಾಗುವ ಪ್ರಯೋಗ ಶಾಲೆಗಳು ಲೈಬ್ರರಿ ಇನ್ನಿತರೆ ಬೇರೆ ಬೇರೆ ವ್ಯವಸ್ಥೆಗಳಿಗೆ ಕಲಾ ಮತ್ತು ವಾಣಿಜ್ಯ ವಿಭಾಗದ ಕಾಲೇಜುಗಳಿಗಿಂತ ವಿಜ್ಞಾನ ವಿಭಾಗದ ಕಾಲೇಜಿಗೆ ಹೆಚ್ಚು ಹಣ ಬೇಕಾಗುವ ಕಾರಣದಿಂದ ಮಾಡಲಾಗಲಿಲ್ಲ. ಈಗ ವಿಜ್ಞಾನ ಕಾಲೇಜುಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ನಾವು ಈಗಾಗಲೇ ಹೇಳಿದ್ದೇವೆ. ಎಲ್ಲೆಲ್ಲಿ ವಿಜ್ಞಾನ ಕಾಲೇಜುಗಳು ಬೇಕೆಂದು ಅನುಮತಿ ಕೇಳಿದ್ದಾರೋ ಆ ಕಾಲೇಜುಗಳಿಗೆ ನಾವು ಅನುಮತಿಯನ್ನು ನೀಡಿಲ್ಲ. ಆದರೆ ಕಲಾ ಮತ್ತು ವಾಣಿಜ್ಯ ವಿಭಾಗದ ಕಾಲೇಜುಗಳಿಗೆ ಅನುಮತಿಯನ್ನು ನೀಡಿದ್ದೇವೆ. ಆದೇ ರೀತಿ ಮಾನ್ಯ ಸದಸ್ಯರು ಕೇಳಿರುವ ವಿಜ್ಞಾನ ವಿಭಾಗವನ್ನು ಬದಲಾವಣೆ ಮಾಡಿ ಕಲಾ ಮತ್ತು ವಾಣಿಜ್ಯ ವಿಭಾಗಕ್ಕೆ ಅಫಿಲಿಯೇಶನ್ ಕೊಡಿ ಎಂದು ನಾವು ವಿಶ್ವವಿದ್ಯಾನಿಲಯದ ಉಪಕುಲಪತಿಗಳಿಗೆ ತಿಳಿಸಿದ್ದೇವೆ. ಅವರಿಂದ ಅಫಿಲಿಯೇಶನ್ ಬಂದಾದ ಮೇಲೆ ತಾವು ಕಾಲೇಜು ಪ್ರಾರಂಭ ಮಾಡ ಬಹುದು.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಇಲ್ಲ ಆಗುವುದಿಲ್ಲ ತಾವು ಕುಳಿತುಕೊಳ್ಳಿ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟ ಆಶ್ವಾಸನೆ ಈಡೇರಲಿಲ್ಲ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಇಲ್ಲಿಗೆ ಮುಗಿಯಿತು. ಆದರೂ ನಾನು ತಮಗೆ ಅವಕಾಶ ಮಾಡಿಕೊಟ್ಟಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ.....

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ, ಹೋದ ಸಲ ಇದೇ ಸದನದಲ್ಲಿ ಮಾನ್ಯ ವಿದ್ಯಾ ಮಂತ್ರಿಗಳು ಭರವಸೆ ಕೊಟ್ಟಿದ್ದರು. ಆಗ ಮಾನ್ಯ ಜೀವರಾಜ ಆಳ್ವರವರು ಮಂತ್ರಿಗಳಾಗಿದ್ದರು. ಅವರು ಮುಂದಿನ ವರ್ಷ ಕಾಲೇಜು ಕೊಡುತ್ತೇವೆಂದು ಕೊಟ್ಟ ಭರವಸೆ ಈಡೇರಲಿಲ್ಲ. ಅದಕ್ಕೆ ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಿದ್ದಾರೆ.

ಅಧ್ಯಕ್ಷರು.—ಭರವಸೆಗಳ ಸಮಿತಿ ಇದೆ. ಅವರು ನೋಡುತ್ತಾರೆ. ನಾನು ಈಗ ಅವಕಾಶ ಕೊಡುವುದಿಲ್ಲ. ಮಾನ್ಯ ಬಸವನಗೌಡರಿಗೆ ಒಂದೇ ಸಲ ಅವಕಾಶ ಕೊಟ್ಟಿದ್ದೇನೆ. ಅದೇ ರೀತಿ ಮಾನ್ಯ ಜಮಖಂಡಿಯವರಿಗೂ ಒಂದೇ ಒಂದು ಅವಕಾಶ ಕೊಟ್ಟಿದ್ದೇನೆ. ಈಗ ನಾನು ಇವರಿಗೆ ಹೆಚ್ಚು ಅವಕಾತಕೊಟ್ಟರೆ ಅವರೇನು ಅನ್ನುತ್ತಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ, ಅವರು ಮಂತ್ರಿಗಳ ಆಶ್ವಾಸನೆ ಈಡೇರಲಿಲ್ಲ ಎಂದು ಕೇಳುತ್ತಿದ್ದಾರೆ.

ಅಧ್ಯಕ್ಷರು.—ಇಲ್ಲ ಆಗುವುದಿಲ್ಲ. ಬೇಕಾದರೆ ತಾವು ಅರ್ಧ ಗಂಟೆ ಚರ್ಚೆಗೆ ಹಾಕಿ. ನಾನು ಅವಕಾಶ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಂತ್ರಿಗಳು ಇಲ್ಲೆ ಇದ್ದಾರೆ. ಉತ್ತರ ಹೇಳಬಹುದು. ಅದಕ್ಕೆ ಅರ್ಧ ಗಂಟೆ ಚರ್ಚೆಗೆ ಏತಕ್ಕೆ ಹಾಕಬೇಕು ?

ಅಧ್ಯಕ್ಷರು.—ಇಲ್ಲ ಆಗುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಕಲಾ ಮತ್ತು ವಾಣಿಜ್ಯ ವಿಭಾಗಕ್ಕೆ ಈಗಾಗಲೇ ಸರ್ಕಾರ ಅನುಮತಿ ಕೊಟ್ಟಿದೆ ಎಂದು ನಾನು ಹೇಳಿದೆ. ಆದರೆ ಅವರು ವಿಜ್ಞಾನ ವಿಭಾಗ ಬೇಕೆಂದು ಕೇಳಿದ್ದಾರೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ ನಾವು ಅಫಿಲಿಯೇಶನ್ ಫೀಸನ್ನು ಕೊಟ್ಟಿರುವುದು ಕಲಾ ಮತ್ತು ವಿಜ್ಞಾನ ವಿಭಾಗ ಬೇಕೆಂದು.....

ಅಧ್ಯಕ್ಷರು.—ಇಲ್ಲ, ಆಗುವುದಿಲ್ಲ. Don't record* * *

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ.....

ಅಧ್ಯಕ್ಷರು.—ಇಲ್ಲ. ಆಗುವುದಿಲ್ಲ. ತಾವೇನೇ ಮಾತನಾಡಿದರೂ ರೆಕಾರ್ಡ್ ಆಗುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಕಲಾ ಮತ್ತು ವಾಣಿಜ್ಯ ವಿಭಾಗವನ್ನು ತೆರೆಯುವುದಕ್ಕೆ ಸರ್ಕಾರದ ವತಿಯಿಂದ ಅನುಮತಿಯನ್ನು ನಾವು ಕೊಟ್ಟಿದ್ದೇವೆ. ಆದರೆ ಉಪಕುಲ ಪತಿಗಳು ಅಫಿಲಿಯೇಶನ್ ಕೊಡಬೇಕು. ನಮ್ಮ ವತಿಯಿಂದ ನಮ್ಮ ಇಲಾಖಾ ವತಿಯಿಂದ ವಿಜ್ಞಾನ ವಿಭಾಗ ಎಂದು ಇದ್ದದ್ದನ್ನು ಬದಲಾವಣೆ ಮಾಡಿ ಕಲಾಮತ್ತು ವಾಣಿಜ್ಯ ವಿಭಾಗಕ್ಕೆ ಅನುಮತಿ ಕೊಡಬಹುದೆಂದು ವಿಶ್ವವಿದ್ಯಾನಿಲಯಕ್ಕೆ ತಿಳಿಸಿದ್ದೇವೆ. ಅವರಿಂದ ತಮಗೆ ಅಫಿಲಿಯೇಶನ್ ಬರುತ್ತದೆ. ತಾವು ಹೇಳಿದ್ದು ವಿಜ್ಞಾನ ವಿಭಾಗ ಎಂದು. ಆದರೆ ಕಲಾ ಮತ್ತು ವಾಣಿಜ್ಯ ವಿಭಾಗಕ್ಕೆ ಸರ್ಕಾರದ ಮಂಜೂರಾತಿ ನೀಡಿದೆ. ಆದರೆ ವಿಜ್ಞಾನ ವಿಭಾಗವನ್ನು ಈ ವರ್ಷ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ ಇಲ್ಲಿ.....

ಅಧ್ಯಕ್ಷರು.—ಇಲ್ಲ ಆಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಇದು ಸಣ್ಣ ವಿಚಾರ ಅಲ್ಲ. ಫೈನ್ಸ್ ಸಬ್ಜೆಕ್ಟ್‌ಗೆ ಏಕೆ ಅನುಮತಿ ಕೊಟ್ಟಿಲ್ಲ ?

ಶ್ರೀ ಎಂ. ಚಂದ್ರಶೇಖರ್.—ಚಿಕ್ಕನಾಯಕನಹಳ್ಳಿಯಲ್ಲಿ ಫಸ್ಟ್ ಗ್ರೇಡ್ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಅನುಮತಿಯನ್ನು ಕೊಟ್ಟಿದೆ. ಈ ಕಾಲೇಜಿಗೆ ವಿಶ್ವವಿದ್ಯಾನಿಲಯದ ಅಫಿಲಿಯೇಷನ್ ಆಗಬೇಕಲ್ಲಾ ? ಇದೇನು ಪ್ರೈಮರಿ ಸ್ಕೂಲಾ ?

ಶ್ರೀ. ಎಸ್. ಬಂಗಾರಪ್ಪ.—ಕಲೆ ವಿಷಯಕ್ಕೆ ಸರ್ಕಾರ ಅನುಮತಿ ಕೊಟ್ಟಿದೆ. ವಿಜ್ಞಾನ ವಿಷಯಕ್ಕೆ ಏಕೆ ಅನುಮತಿಯನ್ನು ಕೊಟ್ಟಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಒಂದು ಕಾಲೇಜನ್ನು ಪ್ರಾರಂಭ ಮಾಡಬೇಕಾದರೆ ಕನಿಷ್ಟ ೫ ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಆ ಕಾರಣದಿಂದ ಇನ್ನೂ ನಾವು ಒಪ್ಪಿಕೊಂಡಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಆ ವಿಷಯದ ಬಗ್ಗೆಯು ಕ್ಲಾಸ್‌ಗಳನ್ನು ತೆರೆಯುವುದಕ್ಕೆ ಅನುಮತಿ ಕೊಡಿ.

ಶ್ರೀ ಎಂ. ಚಂದ್ರಶೇಖರ್.—ನೀವೇ ಒಂದು ಸಾರಿ ಬಂದು ನೋಡಿದರೆ ಗೊತ್ತಾಗುತ್ತದೆ.

ಅಧ್ಯಕ್ಷರು.—ಕ್ವೊಶ್ಚನ್ ಹವರ್ ಮುಗಿದುಹೋಯಿತು. ಇಡೀ ದಿವಸ ಕ್ವೊಶ್ಚನ್ ಹವರ್‌ನ್ನು ಮುಂದಾವರಿಸುವುದಕ್ಕೆ ಆಗುತ್ತದೆಯೇ ? ಈ ವಿಷಯವನ್ನು ತಮಗೆ ಬೇಕಾದರೆ ಅರ್ಧ ಗಂಟೆ ಕಾಲದ ಚರ್ಚೆಗೆ ಹಾಕಿ. ಈಗ ನಾನು ಪರ್ಮಿಷನ್ ಕೊಡುವುದಿಲ್ಲ. (ಈ ಸಮಯದಲ್ಲಿ ವಿರೋಧಪಕ್ಷದ ಕೆಲವು ಸದಸ್ಯರುಗಳು ಒಂದೇ ಸಾರಿ ಎದ್ದುನಿಂತು ಮಾತನಾಡುತ್ತಿದ್ದರು.)

ಅಧ್ಯಕ್ಷರು.—ತಾವು ಕೂಡ್ರಿ. ನಾನು ಹೇಳ್ತೀನೆ. ತಾವು ಕೂಡ್ರಿ. ಶಿವಣ್ಣನವರೇ ತಮ್ಮ ಪ್ರಶ್ನೆಯನ್ನು ಕೇಳಿ.

***(ಅಧ್ಯಕ್ಷತ ಆಪ್ಪಣೆ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಅವರು ನನ್ನ ಹತ್ತಿರ ಬರಲಿ, ಅಧಿಕಾರಿಗಳನ್ನೂ ಕರೆಸಿ ವಿಚಾರ ಮಾಡೋಣ.

ಶ್ರೀ ಬಿ. ಲಕ್ಕಪ್ಪ.—ಸೈನ್ಸ್ ಕಾಲೇಜನ್ನು ಓಪನ್ ಮಾಡದೇ ಇರುವುದರಿಂದ ನೂರಾರು ಹುಡುಗರಿಗೆ ಬಹಳ ತೊಂದರೆಯಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಸೈನ್ಸ್ ಕಾಲೇಜನ್ನು ತಾವು ಪ್ರಾರಂಭ ಮಾಡುತ್ತಿರೊ ಇಲ್ಲವೋ ?

ಶ್ರೀ ಎಂ. ಚಂದ್ರಶೇಖರ್.—ಅದಕ್ಕೆ ಯೂನಿವರ್ಸಿಟಿಯವರು ಪರ್ಮಿಷನ್ ಕೊಡಬೇಕಲ್ಲಾ ?

ಶ್ರೀ ಬಿ. ಲಕ್ಕಪ್ಪ.—ಈ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಯೂನಿವರ್ಸಿಟಿ ಒಪ್ಪಿಗೆ ಕೊಟ್ಟಿದೆ ಹಾಗೂ ಅಫಿಲಿಯೇಷನ್ ಆಗಿದೆ.

ಅಧ್ಯಕ್ಷರು.—ಹೀಗೆ ಇಂಟರ್‌ಫಿಯರೆನ್ಸ್ ಮಾಡುವುದು ಸರಿಯಲ್ಲ. ನೋ. ನೋ.

ಶ್ರೀ ಬಿ. ಲಕ್ಕಪ್ಪ.—ಎಲ್ಲಾ ಕಡೆ ಕಾಲೇಜನ್ನು ಕೊಡಲಾಗಿದೆ. ನಮ್ಮ ತಾಲ್ಲೂಕಿನಲ್ಲಿ ಒಂದು ಕಾಲೇಜನ್ನು ಕೊಟ್ಟರೆ ಏನಾಗುತ್ತದೆ ?

ಅಧ್ಯಕ್ಷರು.—ಇದರ ಬಗ್ಗೆ ಹಾಫ್ ಎನ ಹವರ್ ಡಿಸ್ಕಷನ್ ಹಾಕಿ. ಈಗ ತಾವು ದಯವಿಟ್ಟು ಕಾಳಿತುಕೊಳ್ಳಿ.

ಶ್ರೀ ಎಂ. ಚಂದ್ರಶೇಖರ್.—ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭ ಮಾಡಲು ನೂರಾರು ಬೇಡಿಕೆಗಳಿದ್ದರೂ, ಚಿಕ್ಕನಾಯಕನ ಹಳ್ಳಿಯಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಆಗಲೇಬೇಕೆಂದು ಈ ವಿಷಯವನ್ನು ಕ್ಯಾಬಿನೆಟ್ ಮುಂದೆ ಇಡಿಸಿ ಅಪ್ರೂವ್ ಮಾಡಿಸಿದ್ದೇವೆ. ಮೊದಲು ಈ ಕಾಲೇಜಿನವರು ವಿಜ್ಞಾನ ವಿಷಯಕ್ಕೆ ಅಫಿಲಿಯೇಷನ್ ತೆಗೆದುಕೊಂಡಿದ್ದರು. ಅದನ್ನು ನಾವು ಆರ್ಟ್ಸ್ ಅಂಡ್ ಕಾಮರ್ಸ್‌ಗೆ ಬದಲಾವಣೆ ಮಾಡಿಸಿದೆವು. ಈಗ ಅದನ್ನು ಬೇಕಾದರೆ ಬದಲಾವಣೆ ಮಾಡಿಸಿಕೊಡೋಣ.

ಶ್ರೀ ಬಿ. ಲಕ್ಕಪ್ಪ.—ಇನ್ನು ಮೂರು ದಿವಸಗಳೊಳಗಾಗಿ ಈ ಕಾಲೇಜನ್ನು ಪ್ರಾರಂಭ ಮಾಡುವ ಬಗ್ಗೆ ತೀರ್ಮಾನ ಮಾಡುತ್ತೇವೆಂದು ಹೇಳುವವರೆಗೂ ನಾನು ಹೀಗೆ ನಿಂತಿರುತ್ತೇನೆ. ಒಂದು ಕಾಲೇಜನ್ನು ಕೊಡುವುದಕ್ಕೆ ೩ ವರ್ಷಗಳು ಬೇಕಾ ?

ಅಧ್ಯಕ್ಷರು.—ಮತ್ತೊಬ್ಬರ ಸಮಯವನ್ನು ತಾವು ಮೊಟಕು ಮಾಡುವುದು ಸರಿಯಲ್ಲ. ತಾವು ಕೂಡ್ರಿ. ಶಿವಣ್ಣನವರೇ ತಾವು ಕೇಳ್ರಿ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ,

ಅಧ್ಯಕ್ಷರು.—ತಾವು ಕೂಡ್ರಿ ಅಂದರೆ ಕೂರಬೇಕು.

ಶ್ರೀ ಬಿ. ಲಕ್ಕಪ್ಪ.—ನಾನು ನಿಂತುಕೊಂಡೇ ಇರುತ್ತೇನೆ.

ಅಧ್ಯಕ್ಷರು.—ಹಾಗೇ ನಿಂತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ದಯವಾಡಿ ತಾವು ಯೂನಿವರ್ಸಿಟಿಯವರಿಗೆ ಹೇಳಿ ಆದಷ್ಟು ಬೇಗ ಸೈನ್ಸ್ ಸಬ್ಜಕ್ಟ್ ಕಾಲೇಜಿಗೆ ಅನುಮತಿಯೆನ್ನು ಕೊಡಿಸಿ.

ಶ್ರೀ ಎಂ. ಚಂದ್ರಶೇಖರ್.—ಯೂನಿವರ್ಸಿಟಿಗಳು ಆಟಾನಮಸ್ ಬಾಡಿಗಳಾಗಿರುತ್ತವೆ. ಅವರಿಗೆ ಈ ಕಾರಿತು ಬದಲಾವಣೆ ಮಾಡುವಂತೆ ತಿಳಿಸಿದ್ದೇವೆ.

ಶ್ರೀ ಎಸ್ ಬಂಗಾರಪ್ಪ.—ಅವರಿಗೆ ದೂರವಾಣಿ ಮುಖಾಂತರ ಬೇಗನೆ ಸೂಕ್ತ ಕ್ರಮ ತೆಗೆದು ಕೊಳ್ಳುವಂತೆ ತಾವುಗಳು ಹೇಳ ಬಹುದಲ್ಲ ?

ಶ್ರೀ ಎಂ. ಚಂದ್ರಶೇಖರ್.—ಆಯಿತು, ಮತ್ತೊಮ್ಮೆ ಈ ಬಗ್ಗೆ ಅವರಿಗೆ ಹೇಳುತ್ತೇನೆ.